## II. ಪ್ರಶ್ನೆಗಳು :

**(ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ:**

**1. ಹಕ್ಕಿಗಳು ಕವಿತೆ ಯಾರನ್ನು ಕುರಿತು ಬರೆದುದಾಗಿದೆ?**

ಉ. ಹಕ್ಕಿಗಳು ಕವಿತೆ ದಲಿತ, ಶೋಷಿತ, ವರ್ಗದ ದುಡಿಯುವ ಜನಗಳ ಕುರಿತು ಕುರಿಗಾಹಿ, ದನಗಾಹಿ ಹುಡುಗರ ಸ್ವಗತದ ರೂಪದಲ್ಲಿ ಬರೆದಿದ್ದಾರೆ.

**2. ಕುರಿ ದನಗಳನ್ನು ಕಾಯ್ದ ಬಾಲಕರಿಗೆ ಯಾವುದು ಸಿಗಲಿಲ್ಲ?**

ಉ. ಕುರಿ ದನಗಳನ್ನು ಕಾಯ್ದ ಬಾಲಕರಿಗೆ ಅವುಗಳ ಹಾಲು ಸಿಗಲಿಲ್ಲ.

**3. ಎಂಜಲು ತೊಳೆದವರಿಗೆ ಏನು ಸಿಗಬೇಕಾಗಿತ್ತು?**

ಉ. ಎಂಜಲು ತೊಳೆದವರಿಗೆ ಗಂಜಿಯಾದರೂ ಸಿಗಬೇಕಾಗಿತ್ತು.

**4. ಗಿಡಗಳ ಜೊತೆ ಬೆಳೆದವರಿಗೆ ಯಾವ ಭಾಗ್ಯ ಸಿಗಲಿಲ್ಲ?**

ಉ. ಗಿಡಗಳ ಜೊತೆ ಬೆಳೆದವರಿಗೆ ಓದುವ ಬರೆಯುವ ಭಾಗ್ಯ ಸಿಗಲಿಲ್ಲ.

**5. ಬಾಲಕರು ಚಳಿಯನ್ನು ತಡೆಯದೆ ಕುಸಿದುದು ಏಕೆ?**

ಉ. ಹಗಲಿರುಳು ದುಡಿದರೂ ಚಳಿ-ಮಳೆಯಿಂದ ರಕ್ಷಿಸಿಕೊಳ್ಳಲು ಹೊದಿಕೆ ಇಲ್ಲದೇ ಬಾಲಕರು ಕುಣಿದರು.

**6. ಬಾಲಕರ ಕನಸುಗಳು ಹೇಗೆ ಕಮರಿ ಹೋಗಿವೆ?**

ಉ. ಅರಳುವ ಮುನ್ನವೇ ಬಾಡಿ ಹೋಗುವ ಹೂಗಳಂತೆ ಬಾಲಕರ ಕನಸುಗಳು ಕಮರಿ ಹೋಗಿವೆ.

**ಆ. ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ:**

**1. ಹಕ್ಕಿಗಳು ಕವಿತೆಯಲ್ಲಿ ಬಾಲಕರು ಯಾವ ಯಾವ ಅವಕಾಶಗಳಿಂದ ವಂಚಿತರಾಗಿದ್ದಾರೆ?**

ಉ. ಬಾಲಕರು ಕುರಿ, ದನಗಳನ್ನು ಮೇಯಿಸಿದರೂ ಅವುಗಳ ಹಾಲನ್ನು ಕುಡಿಯದೇ ಹೋದವರು. ಗಿಡಗಳ ಜೊತೆಯಲ್ಲಿ ಬೆಳೆದರೂ ಓದುವ ಭಾಗ್ಯವಿಲ್ಲದವರು ಎಂಜಲು ತೊಳೆದು, ಗಂಜಲ ಬಳಿದರೂ ಗಂಜಿಯನ್ನು ಕುಡಿಯುವ ಅವಕಾಶದಿಂದಲೂ ವಂಚಿತರಾಗಿದ್ದಾರೆ.

**2. ನೋವುಂಡ ಬಾಲಕರಿಗೆ ಯಾವ ಯಾವ ಅನುಭವಗಳಾಗಿವೆ?**

ಉ. ಉಳ್ಳವರಿಗಾಗಿ ದುಡಿದು ದಣಿದು ಬಾಲಕರು ಕೊನೆಗೆ ಚಳಿ ಮಳೆಯಿಂದ ರಕ್ಷಿಸಿಕೊಳ್ಳಲು ಸೂರು ಮತ್ತು ಹೊದಿಕೆಗಳಿಲ್ಲದೆ ಚಳಿಯ ಅನುಭವ ಪಡೆದಿದ್ದಾರೆ. ಬಿಸಿಲು-ಮಳೆ-ಚಳಿಯೆನ್ನದೆ ದುಡಿಯುವ ಇವರ ಬದುಕು ಒಣಗಿ ಉರಿದು ಹೋಗಿ ಬೂದಿಯಾಗುವ ಎಲೆಗಳಂತೆ ಅರಳುವ ಮುನ್ನ ಬಾಡುವ ಹೂವಿನಂತೆ ಬೆಟ್ಟ ಗುಡ್ಡಗಳನ್ನು ಏರಿಳಿದು ಪಾತಾಳದ ಕರಾಳ ನೋವಿನ ಅನುಭವ ಪಡೆದಿದ್ದಾರೆ.

Scanned with CamScanner

3. ಬಾಲಕರ ಹಾಡು ಮತ್ತು ನಾಡು ಯಾವ ಸ್ವರೂಪದ್ದಾಗಿದೆ? ಏಕೆ?

ಉ. ಸಮಯದ ಪರಿವೆಯೇ ಇಲ್ಲದೇ ಜೀವನಕ್ಕೆ ಗುರಿಯಿಲ್ಲದೆ ಎತ್ತಲೋ ಸಾಗಿದ ಬಾಲಕರಿಗೆ ಸದಾ ನೋವಿನಿಂದ ಕೂಡಿದ ಪಾಡೇ ಇವರ ಜೀವನದ ಹಾಡು. ಕತ್ತಲ ಪ್ರಪಂಚದಲ್ಲಿ ಬೆಳಕನ್ನು ಅರಸುವುದೇ ಇವರ ನಾಡು ಎಂದು ಕವಿ ಹೇಳಿದ್ದಾರೆ.

**ಇ. ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:**

1. **ಬಾಲಕರದು ನೋವಿನ ಹಾಡು ಕತ್ತಲ ನಾಡು ಎಂದು ಕವಿ ಏಕೆ ಕರೆದಿದ್ದಾರೆ?**

ಉ. ಬಿಸಿಲು ಮಳೆ ಚಳಿಯೆನ್ನದೇ ದುಡಿಯುವ ಬಾಲಕರ ಬದುಕು ಒಣಗಿ ಉರಿದು ಹೋಗಿ ಬೂದಿಯಾಗುವ ಎಲೆಗಳಂತೆ ಅರಳುವ ಮುನ್ನವೇ ಬಾಡುವ ಹೂವಿನಂತೆ ಬಾಲ್ಯದಿಂದ ದುಡಿತ, ಬಡತನಗಳಲ್ಲಿ ಇವರ ಬಾಳು ಕಮರಿ ಹೋಗುತ್ತದೆ. ಇವರ ಕನಸುಗಳು ಕರಗಿ ಹೋಗುತ್ತವೆ. ಸಮಯದ ಪರಿವೆ ಇಲ್ಲದೇ ಜೀವನಕ್ಕೆ ಗುರಿ, ದಿಕ್ಕು ದೆಸೆಗಳಿಲ್ಲದೇ ಇವರ ಬದುಕು ಎತ್ತಲೋ ಸಾಗಿದೆ. ಕಷ್ಟ, ನೋವು, ಶೋಷಣೆಗಳಿಂದ ಕೂಡಿದ ತಮ್ಮ ಬಾಳಿನಲ್ಲಿ ಬೆಳಕಿಗಾಗಿ ಹಂಬಲಿಸುವ ಈ ಹಕ್ಕಿಗಳದು ನೋವಿನ ಹಾಡು, ಕತ್ತಲ ನಾಡು ಎಂದು ಕವಿ ಕರೆದಿದ್ದಾನೆ.

2. **'ಹಕ್ಕಿಗಳು' ಕವಿತೆಯಲ್ಲಿ ವ್ಯಕ್ತಗೊಂಡಿರುವ ಕವಿಯ ಭಾವನೆಗಳೇನು?**

ಉ. ಹಕ್ಕಿಗಳು ಕವಿತೆಯಲ್ಲಿ ಕವಿ ದಲಿತ, ಶೋಷಿತ ಹಾಗೂ ದುಡಿಯುವ ಜನಗಳ ಧ್ವನಿಯನ್ನು ಕುರಿ ಕಾಯುವ, ದನ ಕಾಯುವ ಹುಡುಗರ ಸ್ವಗತದ ರೂಪದಲ್ಲಿ ಬರೆದಿದ್ದಾರೆ. ಸಾಮಾಜಿಕ ಜಾಗ್ರತಿ ಹಾಗೂ ಬದಲಾವಣೆ, ಸರ್ವ ಸಮಾನತೆಯ ಸಮಾಜ ಕಟ್ಟ ಬಯಸುವುದು ಕವಿಯ ಆಶಯ. ಆದುದರಿಂದ ದುಡಿಯುವ ಶೋಷಿತ ಬಾಲಕರ ಸ್ಥಿತಿಯನ್ನು ಮನ ಮುಟ್ಟುವಂತೆ ಚಿತ್ರಿಸಿದ್ದಾರೆ. ಬಾಲಕರು ಯಾವ ಯಾವುದರಿಂದ ವಂಚಿತರಾಗಿದ್ದಾರೆ ಎಂಬುದನ್ನು ತಿಳಿಸುತ್ತಾರೆ. ಎಂತೆಂತಹ ಕಷ್ಟಗಳನ್ನು ಎದುರಿಸಿಯೂ ಬದುಕುವ ಹಕ್ಕನ್ನು ಕಳೆದುಕೊಂಡಿದ್ದಾರೆಂಬುದನ್ನು ತಿಳಿಸುತ್ತಾರೆ.

**ಈ. ಸಂದರ್ಭದೊಡನೆ ವಿವರಿಸಿರಿ:**

1. **'ಹಾಲು ಕುಡಿಯದೇ ಹೋದವರು'.**

ಉ. ಪ್ರಸ್ತುತ ಸಾಲನ್ನು ದಲಿತ ಕವಿ ಡಾ. ಸಿದ್ಧಲಿಂಗಯ್ಯನವರ 'ಹಕ್ಕಿಗಳು' ಕವನದಿಂದ ಆಯ್ದುಕೊಳ್ಳಲಾಗಿದೆ. ಕವಿ ಶೋಷಿತ ವರ್ಗದವರ ಸ್ಥಿತಿಗತಿಯನ್ನು ವಿವರಿಸುತ್ತ ಈ ಮಾತನ್ನು ಹೇಳುತ್ತಾರೆ.

ಬೆಟ್ಟ-ಗುಡ್ಡಗಳ ನಡುವೆ ದನ-ಕುರಿಗಳನ್ನು ಮೇಯಿಸುತ್ತ ಕಷ್ಟ ನೋವುಗಳ ಜೀವನ ಸಾಗಿಸುವ ದುಡಿಯುವ ವರ್ಗದ ಶ್ರಮಜೀವಿಗಳು ಕಷ್ಟದ ಕರಾಳ ಮುಖವನ್ನು ಕಂಡವರು. ಹಸುಕುರಿಗಳನ್ನು ಮೇಯಿಸಿದರೂ ಅವುಗಳ ಹಾಲು ಕುಡಿಯುವ ಅವಕಾಶದಿಂದ ವಂಚಿತರು. ತೋಟದ ಗದ್ದೆ, ಗಿಡ-ಮರಗಳ ನಡುವೆ ದುಡಿತದಲ್ಲಿ ಓದು-ಬರಹ ಶಾಲೆಯ ಮುಖವನ್ನು ಕಾಣುವ ಭಾಗ್ಯ ಅವರಿಗಿಲ್ಲವೆಂದು ಕವಿ ಹೇಳುತ್ತಾರೆ. ಅವಕಾಶ ವಂಚಿತ ವರ್ಗದ ಮಕ್ಕಳ ಸ್ಥಿತಿಯನ್ನು ಕವಿ ಚಿತ್ರಿಸಿದ್ದಾರೆ.



Scanned with CamScanner

2. 'ಗಂಜಿಯ ಕಾಣದೆ ದುಡಿದವರು'

ಉ. ಪ್ರಸ್ತುತ ಸಾಲನ್ನು ದಲಿತ ಕವಿ ಡಾ. ಸಿದ್ಧಲಿಂಗಯ್ಯನವರ 'ಹಕ್ಕಿಗಳು' ಕವನದಿಂದ ಆಯ್ದುಕೊಳ್ಳಲಾಗಿದೆ. ಕವಿ ದುಡಿಯುವ ವರ್ಗದ ಬಡತನದ ಸ್ಥಿತಿಯನ್ನು ಇಲ್ಲಿ ವಿವರಿಸಿದ್ದಾರೆ. ತೋಟ ಗದ್ದೆಗಳು, ಗಿಡ-ಮರಗಳ ನಡುವೆಯೇ ದುಡಿಯುತ್ತ ಬೆಳೆದು, ಉಳ್ಳವರ ಮನೆಯ ಕಸ-ಮುಸುರತೆ ಗಂಜಲ, ಸಗಣಿಗಳನ್ನು ಬಾಚುವ ಕಾಯಕವನ್ನು ನಿರಂತರವಾಗಿ ಮಾಡುತ್ತ ಬಂದರೂ ಹೊಟ್ಟೆಗೆ ಸರಿಯಾಗಿ ಸಿಗದೆ ದುಡಿಯುತ್ತಲೇ ಇರುವ ಸ್ಥಿತಿ ಇವರದೆಂದು ಕವಿ ವಿವರಿಸಿದ್ದಾರೆ.

3. 'ಕಮರುವ ಬಣ್ಣದ ಕನಸುಗಳು'

ಉ. ಪ್ರಸ್ತುತ ಸಾಲನ್ನು ದಲಿತ ಕವಿ ಡಾ. ಸಿದ್ಧಲಿಂಗಯ್ಯನವರ 'ಹಕ್ಕಿಗಳು' ಕವನದಿಂದ ಆಯ್ದುಕೊಳ್ಳಲಾಗಿದೆ. ಭವಿಷ್ಯ ಕಾಣದೆ ದುಡಿಯುವ ಶೋಷಿತರ ಕುರಿತು ಕವಿ ಈ ಮಾತನ್ನು ಹೇಳುತ್ತಾರೆ. ಉರಿ ಬಿಸಿಲಿನಲ್ಲಿ ಉರಿದು ಬೂದಿಯಾಗುವ ಎಲೆಗಳಂತೆ, ಅರಳುವ ಮುನ್ನವೇ ಬಾಡುವ ಹೂಗಳಂತೆ ನನಸಾಗದೆ ನಿರಾಸೆಗೊಳ್ಳುವ ಕನಸುಗಳಂತೆ ದುಡಿಯುವ ವರ್ಗದವರ ಜೀವನ. ದುಡಿತದಲ್ಲೇ ಜೀವನ ಕರಗಿ, ಬದುಕು ವಿಕಾಸ ಹೊಂದುವ ಅವಕಾಶವೇ ಇಲ್ಲದೇ, ಕೇವಲ ಕನಸಿನಲ್ಲೇ ಕಾಲ ಕಳೆಯಬೇಕಾದ ಸ್ಥಿತಿ ಇವರದೆಂದು ಕವಿ ಹೇಳುತ್ತಾರೆ.

4. ಬೆಳಕನು ಅರಸುವ ಹಕ್ಕಿಗಳು.

ಉ. ಪ್ರಸ್ತುತ ಸಾಲನ್ನು ದಲಿತ ಕವಿ ಡಾ. ಸಿದ್ಧಲಿಂಗಯ್ಯನವರ 'ಹಕ್ಕಿಗಳು' ಕವನದಿಂದ ಆಯ್ದುಕೊಳ್ಳಲಾಗಿದೆ. ಬಾಲಕರು ಹೊತ್ತು ಗೊತ್ತಿಲ್ಲದೇ ದುಡಿಯುತ್ತಿದ್ದರೂ ಸಹ ಅವರ ಬದುಕಿಗೆ ಸರಿಯಾದ ದಿಕ್ಕು ದೆಸೆಯಿಲ್ಲ. ಕತ್ತಲನಾಡಿನಲ್ಲೇ ನೋವಿನ ಹಾಡಿನೊಂದಿಗೆ ಅವರ ಜೀವನ ಸಾಗುತ್ತಿದೆ. ತನ್ನ ಬಾಳಿಗೆ ಬೆಳಕು ಮೂಡಬಹುದೇ ಎಂಬ ನಿರೀಕ್ಷೆಯಲ್ಲಿದ್ದಾರೆಂದು ಕವಿ ಹೇಳುತ್ತಾರೆ.

III. ಭಾಷಾಭ್ಯಾಸ

(ಅ) ಕೆಳಗಿನ 'ಅ' ಪಟ್ಟಿಯೊಂದಿಗೆ 'ಬ' ಪಟ್ಟಿಯನ್ನು ಹೊಂದಿಸಿ ಬರೆಯಿರಿ:

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| 1. ವರ್ಣ | ಅ. ದಿಸೆ |
| 2. ಪ್ರಯಾಣ | ಆ. ಪಕ್ಕಿ 4 |
| 3. ಹಾಲು | ಇ. ಪಯಣ 2 |
| 4. ಹಕ್ಕಿ | ಈ. ಬಣ್ಣ 1 |
| | ಉ. ಪಾಲು 3 |

ಉತ್ತರಗಳು: 1–ಈ, 2–ಇ, 3–ಉ, 4–ಆ

ಆ. ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ:

ಇಳಿ × ಹತ್ತು ಕನಸು × ನನಸು

ಕತ್ತಲು × ಬೆಳಕು ಕಮರು × ಚಿಗುರು



Scanned with CamScanner

ಇ. ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ:

1. ಭಾಗ್ಯ : ಓದಲು ಒಳ್ಳೆಯ ಅವಕಾಶ ದೊರೆತಿರುವುದು ನಮ್ಮ ಭಾಗ್ಯ
2. ಬಣ್ಣದ ಕನಸು : ಬಡವರಿಗೆ ಉತ್ತಮವಾದ ಬದುಕೆಂದರೆ ಅದು ಬಣ್ಣದ ಕನಸಿನಂತೆ.
3. ಉರಿಬಿಸಿಲು : ಬೇಸಿಗೆಯ ಉರಿ ಬಿಸಿಲಿನ ತಾಪವನ್ನು ತಡೆಯುವುದು ಕಷ್ಟ.
4. ಕರಾಳ ನೋವು : ಯುದ್ಧದಲ್ಲಿ ಮಡಿದ ವೀರಯೋಧರ ನೆನಪಾರ್ಥ ಕರಾಳ ನೋವು ಆವರಿಸುತ್ತದೆ.
5. ಬಾಡುವ ಹೂವು: ಬಡವರ ಮಕ್ಕಳ ಬದುಕು ಬಾಡುವ ಹೂವಿನಂತೆ ಕಮರಿ ಹೋಗುತ್ತದೆ.

Scanned with CamScanner